# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.1932/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:18.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:-** ದೂರುದಾರರಿಗೆ ಸೇರಿದ ದೇವನಹಳ್ಳಿ ತಾಲ್ಲೂಕು ವಿಜಯಪುರ ಗ್ರಾಮದ ಸರ್ವೆ ನಂ.143ರಲ್ಲಿ 1 ಗುಂಟೆ ಜಮೀನು ಕಂದಾಯ ಅದಾಲತ್ ಆರ್.ಆರ್.ಟಿ.ಸಿ.ಆರ್.1115/2014-15ರ ಪ್ರಕಾರ ಖಾತೆ ಬದಲಾವಣೆ ಮಾಡಿ ನೀಡಿದ ಆದೇಶವನ್ನು ಕಾನೂನುಪ್ರಕಾರ ರದ್ದುಗೊಳಿಸಿ, ದೂರುದಾರರ ಹೆಸರಿನಲ್ಲಿ 1 ಗುಂಟೆ ಜಮೀನನ್ನು ಖಾತೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

-----

ಶ್ರೀ ಬೈಯಣ್ಣ, ಮಂಡಿಬೆಲೆ ಗ್ರಾಮ, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ತಹಶೀಲ್ದಾರ್, ದೇವನಹಳ್ಳಿ, (2) ಉಪತಹಶೀಲ್ದಾರ್, ದೇವನಹಳ್ಳಿ, (3) ಗ್ರಾಮ ಲೆಕ್ಕಾಧಿಕಾರಿ, ವಿಜಯಪುರ ಹೋಬಳಿ, (4) ಶ್ರೀ ರಮೇಶ್, ಕಂದಾಯ ನಿರೀಕ್ಷಕರು, ವಿಜಯಪುರ ಹೋಬಳಿ, ದೇವನಹಳ್ಳಿ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೇವನಹಳ್ಳಿ ತಾಲ್ಲೂಕು ಮಂಡಿಬೆಲೆ ಗ್ರಾಮದ 143/3 ಕ್ಷೇತ್ರ 23 ಗುಂಟೆ ಜಮೀನನ್ನು ದೂರುದಾರರು ದಿ.4.9.1992ರಂದು ಕ್ರಯಮಾಡಿಕೊಂಡಿದ್ದು, ಅದರಲ್ಲಿ 22 ಗುಂಟೆಯನ್ನು ಶ್ರೀ ಕೆಂಪಣ್ಣನವರಿಗೆ ಕ್ರಯ ಮಾಡಿ 1 ಗುಂಟೆ ಜಮೀನು ದೂರುದಾರರ ಮಾಲ್ಕಿ ಮತ್ತು ಸ್ವಾಧೀನದಲ್ಲಿ ಉಳಿಸಿಕೊಂಡಿದ್ದರು. ಆದರೆ ಜಿ.ಹನುಮಂತಪ್ಪ ಎನ್ನುವವರು ದೂರುದಾರರಿಗೆ ದಿಕ್ಕುತಪ್ಪಿಸಿ ಒ.ಎಸ್.46/1990ರ ನ್ಯಾಯಾಲಯದ ಡಿಕ್ರಿ ಪ್ರಕಾರ 1 ಗುಂಟೆ ತನಗೆ ಸೇರಬೇಕೆಂದು ಮೋಸದಿಂದ ರಾಜಿ ಪತ್ರ ಬರೆಸಿಕೊಂಡಿರುತ್ತಾರೆ. ಆ ವಿಷಯ ದೂರುದಾರರಿಗೆ ಇದುವರೆಗೆ

ಗೊತ್ತಾಗಿರುವುದಿಲ್ಲ. ಆದರೆ ಎದುರುದಾರರು ಇತ್ತೀಚೆಗೆ ಕಂದಾಯ ಅದಾಲತ್‌ನಲ್ಲಿ 1 ಗುಂಟೆ ದೂರುದಾರರ ಹೆಸರಿನಲ್ಲಿರುವ ಜಮೀನನ್ನು ಜಿ.ಹನುಮಂತಪ್ಪನವರ ಹೆಸರಿಗೆ ಖಾತ ಬದಲಾವಣೆ ಮಾಡಿ ಭ್ರಷ್ಟಾಚಾರದಲ್ಲಿ ತೊಡಗಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

3. 1ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಕಂದಾಯ ಅದಾಲತ್‌ನಲ್ಲಿ ಒ.ಎಸ್.46/1990ರ ಡಿಕ್ರಿಯ ಪ್ರಕಾರ ಜಿ.ಹನುಮಂತಪ್ಪನವರಿಗೆ 1 ಗುಂಟೆ ಜಮೀನು ನೀಡಲಾಗಿದ್ದು, ಆ ಪ್ರಕಾರ ಕಂದಾಯ ಅದಾಲತ್‌ನಲ್ಲಿ ಅದನ್ನು ಅಂಗೀಕರಿಸಿ ಆತನ ಹೆಸರಿನಲ್ಲಿ ಖಾತೆ ಮಾಡಲಾಗಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ಅಕ್ರಮ ನಡೆದಿರದ ಕಾರಣ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ದೂರುದಾರರು ಒಎಸ್.46/1990 ರಲ್ಲಿ ಪಕ್ಷಕಾರರಾಗಿರುವುದಿಲ್ಲ. ಆದರೆ ಆ ದಾವೆಯಲ್ಲಿ ವಾದಿಯಾದ ಮುನಿಯಪ್ಪ ಮತ್ತು ಪ್ರತಿವಾದಿಯಾದ ಜಿ.ಹನುಮಂತಪ್ಪ ಹಾಗೂ ಇತರರು ದಂಡ ಪ್ರಕ್ರಿಯಾ ಸಂಹಿತೆ 1908 ಆದೇಶ 23 ನಿಯಮ 3ರಡಿಯಲ್ಲಿ ನ್ಯಾಯಾಲಯದಲ್ಲಿ ರಾಜಿ ಅರ್ಜಿ ಸಲ್ಲಿಸಿ, ರಾಜಿ ಡಿಕ್ರಿ ಪಡೆದುಕೊಂಡಿರುತ್ತಾರೆ. ಈ ರಾಜಿ ಡಿಕ್ರಿ ಪರಿಶೀಲಿಸಲಾಗಿ, ಸರ್ವೆ ನಂ.143/3ರಲ್ಲಿ ಒಟ್ಟು 22 ಗುಂಟೆ ಜಮೀನನ್ನು ಸಿ.ಕೆಂಪಣ್ಣನವರಿಗೆ ಕ್ರಯಮಾಡಿ, ಇನ್ನುಳಿದ 1 ಗುಂಟೆ ಜಮೀನು ದೂರುದಾರರ ಮಾಲೀಕತ್ವದಲ್ಲಿ ಇದ್ದು, ಅದನ್ನು ದೂರುದಾರರು 1ನೇ ಪ್ರತಿವಾದಿಯಾದ ಜಿ.ಹನುಮಂತಪ್ಪನವರಿಗೆ ಬಿಟ್ಟುಕೊಟ್ಟಿದ್ದಾರೆಂದು ನಮೂದಿಸಲಾಗಿದೆ.

6. ಕಾನೂನು ಪ್ರಕಾರ ದಾವೆಯಲ್ಲಿದ್ದ ಪಕ್ಷಕಾರರು ಮಾತ್ರ ರಾಜಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ತಮ್ಮ ಆಸ್ತಿಗಳ ಬಗ್ಗೆ ಮಾತ್ರ ಅವರು ರಾಜಿ ಆಗಲು ಅನುಮತಿ ಇರುತ್ತದೆ. ಆದರೆ ದೂರುದಾರರು ಒ.ಎಸ್.46/1990ರ ದಾವೆಯಲ್ಲಿ ಪಕ್ಷಕಾರರಲ್ಲದಿದ್ದರೂ ಅವರಿಗೆ ಸೇರಿರುವ 1 ಗುಂಟೆ ಜಾಗವನ್ನು ಜಿ.ಹನುಮಂತಪ್ಪನವರಿಗೆ ಬಿಟ್ಟುಕೊಡಲಾಗಿದೆಯೆಂದು ನಮೂದಿಸಿ ಡಿಕ್ರಿ ಪಡೆದುಕೊಂಡಿದ್ದು,

Sd/-

ಕಂಡುಬರುತ್ತದೆ. ಈ ರೀತಿ ರಾಜಿಯಾದ ಬಗ್ಗೆ ತನ್ನ ಗಮನಕ್ಕೆ ಬಂದಿರುವುದಿಲ್ಲವೆಂದು ದೂರುದಾರರು ತಿಳಿಸಿರುತ್ತಾರೆ. ಅಲ್ಲದೆ, ಆ ಉಳಿದ 1 ಗುಂಟೆ ಜಮೀನು ದೂರುದಾರರ ಹೆಸರಿನಲ್ಲಿ ಮುಂದುವರೆದಿದ್ದು ಕಂಡುಬರುತ್ತದೆ. ಜಿ.ಹನುಮಂತಪ್ಪನವರು ಆ ಡಿಕ್ರಿಯನ್ನು 1994ರಲ್ಲಿಯೇ ಪಡೆದುಕೊಂಡಿದ್ದರೂ ಅದರ ಮೇರೆಗೆ ಖಾತೆ ಬದಲಾವಣೆ ಮಾಡಿಕೊಂಡಿರುವುದಿಲ್ಲ. ಆದರೆ ಎದುರುದಾರರು ದಿ.7.120015ರಂದು ನಡೆಸಿದ ಕಂದಾಯ ಅದಾಲತ್‌ನಲ್ಲಿ ಆರ್.ಆರ್.ಟಿ.ಸಿ.ಆರ್. 1115/2014-15 ರಲ್ಲಿ ಒ.ಎಸ್.46/1990ರ ಡಿಕ್ರಿಯ ಪ್ರಕಾರ ಖಾತೆ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದಾಗ ಅದನ್ನು ಅಂಗೀಕರಿಸಿ ಖಾತೆ ಬದಲಾವಣೆ ಮಾಡಿದ್ದು ಕಂಡುಬರುತ್ತದೆ.

7. ಎದುರುದಾರರು ಈ ರೀತಿ ಕಂದಾಯ ಅದಾಲತ್‌ನಲ್ಲಿ ಖಾತೆ ಬದಲಾವಣೆ ಮಾಡುವ ಪೂರ್ವದಲ್ಲಿ ಪಹಣಿಯಲ್ಲಿ ಹೆಸರು ನಮೂದಾದ ದೂರುದಾರರಿಗೆ ಯಾವುದೇ ನೋಟೀಸು ನೀಡಿರುವುದಿಲ್ಲ ಹಾಗೂ ಆತನ ಹೇಳಿಕೆ ಪಡೆದಿರುವುದಿಲ್ಲ. ಅಲ್ಲದೆ ಒ.ಎಸ್.46/1990ರ ರಾಜಿ ಡಿಕ್ರಿಯ ಕಾನೂನು ಮಾನ್ಯತೆ ಬಗ್ಗೆ ಪರಿಶೀಲಿಸಿಲ್ಲವೆಂದು ಕಂಡುಬರುತ್ತದೆ. ಏಕೆಂದರೆ ಒಂದು ವೇಳೆ ಆ ರಾಜಿ ಡಿಕ್ರಿಯನ್ನು ಎದುರುದಾರರು ಪರಿಶೀಲಿಸಿದ್ದರೆ ಅದರಲ್ಲಿ ಪಕ್ಷಕಾರನಾಗಿರದ ದೂರುದಾರರು ಹೇಗೆ ತಮ್ಮ 1 ಗುಂಟೆ ಜಮೀನನ್ನು ಪ್ರತಿವಾದಿಯಾದ ಜಿಹನುಮಂತಪ್ಪನವರಿಗೆ ಬಿಟ್ಟುಕೊಡಲು ಸಾಧ್ಯ ಎಂಬ ಪ್ರಶ್ನೆ ಉದ್ಭವಿಸುತ್ತಿತ್ತು. ಎದುರುದಾರರು ಈ ಯಾವ ಅಂಶಗಳನ್ನೂ ಪರಿಶೀಲಿಸದೆ ಜಿ. ಹನುಮಂತಪ್ಪ ಸಲ್ಲಿಸಿದ ಅರ್ಜಿಯ ಮೇರೆಗೆ ಕೋರ್ಟ್ ಡಿಕ್ರಿಯಂತೆ ಜಮೀನಿನ ಮಾಲೀಕರ ಗಮನಕ್ಕೆ ತರದೆ ಖಾತೆ ಬದಲಾವಣೆ ಮಾಡಿದ್ದು ಕಾನೂನುಬಾಹಿರವೆನಿಸುತ್ತದೆ. ಇದರಿಂದ ದೂರುದಾರರಿಗೆ ಅನ್ಯಾಯವಾಗಿದ್ದು, ಆತನ 1 ಗುಂಟೆ ಜಮೀನು ಇನ್ನೊಬ್ಬ ವ್ಯಕ್ತಿಯ ಪಾಲಾಗಿದ್ದು ಕಂಡುಬರುತ್ತದೆ. ಆದ್ದರಿಂದ 2ರಿಂದ 4ನೇ ಎದುರುದಾರರು ಕಂದಾಯ ಅದಾಲತ್‌ನಲ್ಲಿ ಕಾನೂನು ಪ್ರಕಾರ ಹಿತಾಸಕ್ತಿಯುಳ್ಳ ಪಕ್ಷಕಾರರಿಗೆ ನೋಟೀಸು ನೀಡಿ ಅವರ ತಕರಾರು ಪಡೆಯದ ಖಾತೆ ಬದಲಾವಣೆ ಮಾಡಿ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

8. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, **ದೂರುದಾರರಿಗೆ ಸೇರಿದ ದೇವನಹಳ್ಳಿ ತಾಲ್ಲೂಕು ವಿಜಯಪುರ ಗ್ರಾಮದ ಸರ್ವೆ ನಂ.143ರಲ್ಲಿ 1 ಗುಂಟೆ ಜಮೀನು ಕಂದಾಯ ಅದಾಲತ್ ಆರ್.ಆರ್.ಟಿ.ಸಿ.ಆರ್.1115/2014-15ರ**

**ಪ್ರಕಾರ ಖಾತೆ ಬದಲಾವಣೆ ಮಾಡಿ ನೀಡಿದ ಆದೇಶವನ್ನು ಕಾನೂನುಪ್ರಕಾರ ರದ್ದುಗೊಳಿಸಿ, ದೂರುದಾರರ ಹೆಸರಿನಲ್ಲಿ 1 ಗುಂಟೆ ಜಮೀನನ್ನು ಖಾತೆ ಮಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು** ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 18/7/17

**[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**

18/7